

# ಮುಟ್ಟು ಗುಟ್ಟಲ್ಲ

■ ಸುಷ್ಮಾ ಸವಸುದ್ದಿ

ಹೊರಜಗತ್ತಿನ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಬಲ್ಲ ಹೆಣ್ಣಿಗೆ ಒಮ್ಮೊಮ್ಮೆ ತನ್ನ ಒಳಜಗತ್ತಿನ ಸವಾಲುಗಳನ್ನು ಎದುರಿಸುವುದೇ ಕಷ್ಟ ಎನ್ನಿಸಿಬಿಡುತ್ತದೆ. ದೈಹಿಕ ಆರೋಗ್ಯ, ಮಾನಸಿಕ ಸ್ಥಿತಿ, ಮುಟ್ಟಿನ ಸಮಸ್ಯೆಗಳು ಆತಂಕವನ್ನು ಸೃಷ್ಟಿಸುತ್ತಲೇ ಇರುತ್ತವೆ. 'ಮುಟ್ಟು–ಗುಟ್ಟು' ಎನ್ನುವ ಭಾವ ಪಕ್ಕಕ್ಕೆ ಸರಿದು, ಮುಕ್ತವಾಗಿ ಚರ್ಚಿಸುವ ವಾತಾವರಣ ಈಚೆಗೆ ನಿರ್ಮಾಣವಾಗಿದೆ.

ಮಹಿಳೆಯರು ಎದುರಿಸುತ್ತಿರುವ ಆರೋಗ್ಯ ಸಮಸ್ಯೆ, ಪ್ಯಾಡ್‌ಗಳ ವಿಲೇವಾರಿ ಸಮಸ್ಯೆ, ಗ್ರಾಮೀಣ ಭಾಗದ ಕೆಲವು ಮಹಿಳೆಯರಲ್ಲಿ ಅರಿವಿನ ಕೊರತೆ ಸವಾಲಾಗಿಯೇ ಉಳಿದಿವೆ. ಈ ಸವಾಲುಗಳನ್ನು ಎದುರಿಸಲು ಮಹಿಳೆಯರಿಗೆ ಮತ್ತು ಬಾಲಕಿಯರಿಗೆ ಬೇಕಿರುವ ಜಾಗೃತಿ ಮೂಡಿಸುವ ಹಾಗೂ ಪರಿಸರಸ್ನೇಹಿಯಾದ ಮುಟ್ಟಿನ ಕಪ್, ಮರುಬಳಕೆ ಪ್ಯಾಡ್‌ಗಳ ಬಳಕೆ ಉತ್ತೇಜಿಸುವ ಕೆಲಸವನ್ನು ಕರಾವಳಿಯ ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ಶಿಕ್ಷಕಿಯೊಬ್ಬರು ಸ್ವಯಂಪ್ರೇರಣೆಯಿಂದ ಮಾಡುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಕೋಲ್ಚಾರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಜಲಜಾಕ್ಷಿ ಕುಕ್ಕುಜೆ ಅವರು ಕಳೆದ ವರ್ಷ ಮೇ 28ರಂದು (ಮುಟ್ಟಿನ ನೈರ್ಮಲ್ಯ ದಿನ) ಗ್ರಾಮದ 70 ಜನ ಮಹಿಳೆಯರಿಗೆ ಮುಟ್ಟಿನ ನೈರ್ಮಲ್ಯದ ಕುರಿತು ಮಾಹಿತಿ ನೀಡಿ, ಉಚಿತವಾಗಿ ಮುಟ್ಟಿನ ಕಪ್ ವಿತರಿಸಿ ಆಂದೋಲನ ಆರಂಭಿಸಿದರು. ಈವರೆಗೆ ಒಂದು ಸಾವಿರ ಹೆಣ್ಣುಮಕ್ಕಳಿಗೆ ಮುಟ್ಟಿನ ಕಪ್ ಮತ್ತು ಮರುಬಳಕೆ ಪ್ಯಾಡ್‌ಗಳನ್ನು ಅವರು ಉಚಿತವಾಗಿ ವಿತರಿಸಿದ್ದಾರೆ. ಜೊತೆಗೆ ಪ್ರೌಢಶಾಲೆಗಳಿಗೆ, ಗ್ರಾಮೀಣ ಭಾಗದ ಮಹಿಳೆಯರಿಗೆ ಮುಟ್ಟಿನ ನೈರ್ಮಲ್ಯದ ಕುರಿತು ಜಾಗೃತಿ ಕಾರ್ಯಾಗಾರ ನಡೆಸುತ್ತಿದ್ದಾರೆ.

'ನನ್ನ ಮಗಳಿನಿಂದ ನಾನು ಈ ಮುಟ್ಟಿನ ಕಪ್ ಬಳಕೆ ಕುರಿತು ತಿಳಿದು, ಉಪಯೋಗಿಸಲು ಆರಂಭಿಸಿದೆ. ಇದು ಬಳಕೆದಾರಸ್ನೇಹಿ ಮತ್ತು ಪರಿಸರಸ್ನೇಹಿ. ಪ್ಯಾಡ್‌ಗಳ ವಿಲೇವಾರಿ ತಲೆಬಿಸಿ



ಜಲಜಾಕ್ಷಿ

ಇಲ್ಲ. ಗ್ರಾಮೀಣ ಭಾಗದ ಬಹುತೇಕ ಮಹಿಳೆಯರು ನಿತ್ಯ ಹೊಲಗಳಲ್ಲಿ ಕೆಲಸಕ್ಕೆ ಹೋಗುತ್ತಾರೆ. ಅವರಿಗೆಲ್ಲ ಈ ಮುಟ್ಟಿನ ಕಪ್ ಬಳಕೆ ಅನುಕೂಲಕರ. ಒಂದು ಕಪ್ ಅನ್ನು ಸುಮಾರು 5ರಿಂದ 6 ವರ್ಷ ಬಳಸಬಹುದಾದ್ದರಿಂದ ಆರ್ಥಿಕ ಹೊರೆಯೂ ಕಡಿಮೆಯಾಗುವುದು. ಈ ನಿಟ್ಟಿನಲ್ಲಿ ಮಹಿಳೆಯರಿಗೆ ಅರಿವು ಮೂಡಿಸಲು ಮುಂದಾದೆ. ಮುಟ್ಟಿನ ಕಪ್ ಉಪಯೋಗಿಸುತ್ತಿರುವ ಮಹಿಳೆಯರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ' ಎಂದು ಜಲಜಾಕ್ಷಿ ತಮ್ಮ ಅನುಭವ ಹಂಚಿಕೊಂಡರು.

ಶಿಕ್ಷಕಿಯ ಈ ಕಾರ್ಯಕ್ಕೆ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು, ವೈದ್ಯರು, ಶಿಕ್ಷಕರು, ಸಂಸ್ಥೆಗಳು ಸಾಥ್ ನೀಡಿವೆ. ಸ್ತ್ರೀರೋಗತಜ್ಞೆ ಡಾ. ವೀಣಾ ಎನ್. ಅವರ ಜೊತೆಗೂಡಿ ಸುಳ್ಯ ತಾಲ್ಲೂಕಿನ ವಿವಿಧ ಶಾಲೆಗಳಿಗೆ ತೆರಳಿ 'ಮುಟ್ಟು ಗುಟ್ಟಲ್ಲ' ಎಂಬ ಹೆಸರಿನಲ್ಲಿ ಜಾಗೃತಿ ಕಾರ್ಯಾಗಾರ ನಡೆಸುವುದರ ಜೊತೆಗೆ ಮರುಬಳಕೆ ಪ್ಯಾಡ್, ಮುಟ್ಟಿನ ಕಪ್ ವಿತರಿಸಿದ್ದಾರೆ.

ಅಜ್ಜಾವರ, ಅಪ್ಪಂಗಾಯ, ಮರ್ಕಂಜ, ಎಲಿಮಲೆ, ಎಣ್ಮೂರು ಕೆಪಿಎಸ್ ಗಾಂಧಿನಗರದ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ ಸ್ವಚ್ಛತೆ, ಆರೋಗ್ಯ, ಮುಟ್ಟಿನ ಸಮಯದಲ್ಲಿ ವಹಿಸಬೇಕಾದ ಕಾಳಜಿ, ಮರುಬಳಕೆ ಪ್ಯಾಡ್, ಮುಟ್ಟಿನ ಕಪ್ ಬಳಕೆಯಿಂದಾಗುವ ಲಾಭ ಕುರಿತು ಕಾರ್ಯಾಗಾರ ನಡೆಸಿ ವಿದ್ಯಾರ್ಥಿನಿಯರಿಗೆ ಸುಮಾರು ಎರಡು ಲಕ್ಷ ಮೌಲ್ಯದ ಮರುಬಳಕೆ ಪ್ಯಾಡ್‌ಗಳನ್ನು ಉಚಿತವಾಗಿ ವಿತರಿಸಿದ್ದಾರೆ. ಇದಕ್ಕಾಗಿ ಹರಿಯಾಣದಿಂದ ಮುಟ್ಟಿನ ಕಪ್, ಮರುಬಳಕೆ ಪ್ಯಾಡ್‌ಗಳನ್ನು ತರಿಸಿಕೊಂಡಿದ್ದಾರೆ. ಈ ಕಾರ್ಯಕ್ರಮಗಳಿಂದ ಪ್ರೇರಣೆಗೊಂಡ ಸುಳ್ಯದ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕ ಪ್ರಕಾಶ ಮೂಡಿತ್ತಾಯ ಅವರು, ತಮ್ಮ ಶಾಲೆಯ 300 ವಿದ್ಯಾರ್ಥಿನಿಯರಿಗೆ ಮುಟ್ಟಿನ ಕಪ್ ಉಚಿತವಾಗಿ ವಿತರಿಸಿದ್ದಾರೆ.

## ಹುಡುಗರಿಗೂ ಅರಿವು

ಮುಟ್ಟಿನ ಕುರಿತು ಹುಡುಗರಿಗೂ ಅರಿವು ಮೂಡಿಸುವುದು ಅಗತ್ಯ ಎನ್ನುವ ಜಲಜಾಕ್ಷಿ ಮೇಡಂ, 'ಯಾವುದೇ ಶಾಲೆಗೆ ಹೋದರೂ ನಾವು ನಡೆಸುವ ಜಾಗೃತಿ ಕಾರ್ಯಾಗಾರ ಹುಡುಗಿಯರ ಜೊತೆಗೆ ಹುಡುಗರನ್ನೂ ಒಳಗೊಂಡಿರುತ್ತದೆ. ಅವರಿಗೂ ತಾಯಿ, ಅಕ್ಕ, ತಂಗಿ, ಗೆಳತಿಯರು ಇರುತ್ತಾರೆ. ಹೆಣ್ಣಿನ ಆರೋಗ್ಯದ ಕುರಿತು ಜ್ಞಾನವಿದ್ದಾಗಲೇ ಅವಳ ನೋವಿಗೆ ಸ್ಪಂದಿಸುವ ಗುಣ ಅವರಲ್ಲಿ ಬೆಳೆಯಲು ಸಾಧ್ಯ' ಎಂದು ಮುಗುಳ್ನಗುತ್ತಾರೆ.

'ಶುಚಿ' ಯೋಜನೆಯಡಿ ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ಪ್ಯಾಡ್ ನೀಡುತ್ತಿದ್ದ ಸರ್ಕಾರದ ಯೋಜನೆ ಈಗ ಸ್ಥಗಿತಗೊಂಡಿದೆ. ಕಳೆದ ವರ್ಷ ಪ್ರಾಯೋಗಿಕವಾಗಿ 2 ಜಿಲ್ಲೆಗಳಿಗೆ ಮುಟ್ಟಿನ ಕಪ್ ವಿತರಿಸಲಾಗಿತ್ತಾದರೂ, ಅದರ ವಿಸ್ತರಣೆಗೆ ಸರ್ಕಾರ ಮುತುವರ್ಜಿ ವಹಿಸಿದಂತಿಲ್ಲ. ಕರಾವಳಿಯ ಜಲಜಾಕ್ಷಿ ಮೇಡಂ ಕಾಳಜಿಯ ಆಂದೋಲನ ರಾಜ್ಯಕ್ಕೆ ಮಾದರಿ.

ಪ್ರತಿಕ್ರಿಯಿಸಿ: feedback@sudha.co.in